# ಇಸ್ತಾನ್‌ಬುಲ್

## ತಬ್ಬಲಿಗಳಿಗೆ ಮಡಿಲಾದ ಅಂತಃಕರಣದ ನಗರ




‘ನಗರವೊಂದಕ್ಕೆ ಚೆಲುವು ಆದರ ಉದ್ಯಾನಗಳಿಂದಲ್ಲ, ತಬ್ಬಲಿಗಳಿಗೆ ಆಸರೆ ಕೊಡುವುದರಿಂದ ಒದಗುತ್ತದೆ’ ಎಂದು ಪ್ರತಿಪಾದಿಸುವ ಈ ಬರಹ, ಬೆಟ್ಟ ಮತ್ತು ಕಡಲುಗಳ ನಡುವೆ ನೆಲೆಸಿರುವ ಇಸ್ತಾನಬುಲ್ ಇಸ್ತಾನ್‌ಬುಲ್‌ನ ಭೌತಿಕ ಚಹರೆಗಳ ಜೊತೆಗೆ ಅಂತರಂಗದ ಚೆಲುವಿನ ಚಿತ್ರಗಳನ್ನೂ ಕಟ್ಟಿಕೊಡುತ್ತದೆ.

■ ರಹಮತ್ ತರೀಕೆರೆ

ಇಪ್ಪತ್ತನಾಲ್ಕು ತಾಸಿನ ಗಗನಯಾನ ಮುಗಿಸಿ ಇಸ್ತಾನ್‌ಬುಲ್‌ನಲ್ಲಿ ಇಳಿದಾಗ, ಇಷ್ಟು ದೂರದಿಂದ ಭಾರತಕ್ಕೆ ಹೇಗಪ್ಪಾ ಬರುತ್ತಿದ್ದರು ಎಂದು ಅಚ್ಚರಿಯಾಯಿತು. ಅಲೆಕ್ಸಾಂಡರ್ ಟರ್ಕಿಯ ಮೂಲಕ ನೆಲಮಾರ್ಗದಲ್ಲಿ ಭಾರತಕ್ಕೆ ಬಂದಿದ್ದನು. ಇಸ್ತಾನ್‌ಬುಲ್‌ನ ರಾಜಕುಮಾರ ಯೂಸೂಫ್ – ಬಿಜಾಪುರದ ಆದಿಲಶಾಹಿ ವಂಶದ ಮೊದಲನೇ ಸುಲ್ತಾನನಾದವನು – ಸೋದರನಿಂದ ಹತ್ಯೆಗೊಳಗಾಗುವುದನ್ನು ತಪ್ಪಿಸಿಕೊಂಡು ಬೀದರಿಗೆ ಬಂದವನು. ಬ್ರಿಟಿಷರ ವಿರುದ್ಧ ಟರ್ಕಿಯ ಸುಲ್ತಾನನ ನೆರವು ಪಡೆಯಲು ಟಿಪ್ಪು ಕಳಿಸಿದ ನಿಯೋಗವಾದರೂ, ಮೈಸೂರಿಂದ ಹೊರಟು ಆರು ತಿಂಗಳ ಕಾಲ ಪಯಣಿಸಿ ಇಸ್ತಾನ್‌ಬುಲ್ ತಲುಪಿತ್ತು. ಫಾಸಲೆ ಎಷ್ಟೇಯಿರಲಿ – ಯುದ್ಧ, ಧರ್ಮ, ವ್ಯಾಪಾರ ಮತ್ತು ಜ್ಞಾನದಾಹಗಳು ಖಂಡಾಂತರ ಯಾತ್ರೆಗಳನ್ನು ಮಾಡಿಸುತ್ತಲೇ ಬಂದಿವೆ.

ಖಂಡಾಂತರ ಯಾತ್ರಾಪಥಗಳಲ್ಲಿ ವಿಶಿಷ್ಟವಾದುದು ‘ಸಿಲ್ಕ್‌ರೂಟ್’. ಇದು ಚೀನಾದಿಂದ ಶುರುವಾಗಿ ಇಟಲಿಯ ವೆನಿಸಿನ ತನಕ ಹಾಯುವ 8000 ಕಿ.ಮೀ. ಉದ್ದಕ್ಕೆ ಹಾಯುತ್ತದೆ. ಇದಕ್ಕೆ ಲಗತ್ತಾಗಿಯೇ ಇಸ್ತಾನ್‌ಬುಲ್, ದಮಾಸ್ಕಸ್, ವೆನಿಸ್, ರೋಂ, ಕಂದಹಾರ್, ಕಾಬೂಲ್, ಬಮಿಯಾನ್ ಮೊದಲಾಗಿ ಪ್ರಾಚೀನವೂ ಚಾರಿತ್ರಿಕ ಮಹತ್ವದವೂ ಶಹರಗಳು ಮೇಲೆದ್ದವು. ವಾಣಿಜ್ಯ ಕಾರವಾನುಗಳ ಮಾರ್ಗದಲ್ಲಿ ಬೀಳುವ ಶಹರಗಳ ಸಮಸ್ಯೆಯೆಂದರೆ,

